## ನಿವೇದನೆ

# ಯುವಶಕ್ತಿ ಬದುಕಿನಿಂದ ವಿಮುಖ ಆಗುತ್ತಿದೆಯೆ?

**ಬದುಕಿನ ಬಗ್ಗೆ ಯುವಜನ ಭರವಸೆ ಕಳೆದುಕೊಳ್ಳಲು ಕಾರಣಗಳೇನು ಎನ್ನುವುದರ ಬಗ್ಗೆ ಗಂಭೀರ ಚಿಂತನೆಗಳು ನಡೆದಿಲ್ಲ. ಸಮಾಜ ಹಾಗೂ ರಾಜಕಾರಣ ಯುವಶಕ್ತಿಯ ಆಶೋತ್ತರಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತಿದೆ ಎನ್ನುವುದರ ವಸ್ತುನಿಷ್ಠ ಅವಲೋಕನವೂ ನಡೆದಿಲ್ಲ.**

ಚಾರ್ಟೆಡ್ ಅಕೌಂಟೆಂಟ್ ಆಗಿ ಪುಣೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಉದ್ಯೋಗಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಸಂಗತಿ, ಯುವಜನರು ಎದುರಿಸುತ್ತಿರುವ ಕೆಲಸದ ಒತ್ತಡದ ಕುರಿತ ಚರ್ಚೆಗೆ ಕಾರಣವಾಗಿದೆ. ಆತ್ಮಹತ್ಯೆ ಮಾಡಿಕೊಂಡ ಇಪ್ಪತ್ತಾರು ವರ್ಷದ ಮಹಿಳೆ – ಕೆಲಸದ ಒತ್ತಡ, ಶೋಷಣೆ ಮತ್ತು ಅಸುರಕ್ಷಿತ ಪರಿಸರದಿಂದಾಗಿ ಸಾಯುವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗಿದ್ದು, ಆ ಆರೋಪಗಳ ಕುರಿತು ಕೇಂದ್ರ ಸರ್ಕಾರ ತನಿಖೆಗೆ ಆದೇಶಿಸಿದೆ. ಪುಣೆಯಲ್ಲಿ ಬದುಕು ಕೊನೆಗೊಳಿಸಿಕೊಂಡ ನತದೃಷ್ಟ ಯುವತಿ ದೇಶದ ಬಹು ದೊಡ್ಡ ಸಮುದಾಯದ ಮನಸ್ಥಿತಿಯನ್ನು ಪ್ರತಿನಿಧಿಸುವಂತಿದ್ದಾಳೆ. ದೇಶದಲ್ಲಿ ನಡೆಯುತ್ತಿರುವ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಅಧ್ಯಯನ ವರದಿ ಪ್ರಕಟಿಸಿರುವ 'ದಿ ಲ್ಯಾನ್ಸೆಟ್' ನಿಯತಕಾಲಿಕೆ, ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರಲ್ಲಿ 20ರಿಂದ 34ರ ವಯೋಮಾನದವರೇ ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಗುರ್ತಿಸಿದೆ. ಮತ್ತೂ ಆತಂಕದ ಸಂಗತಿಯೆಂದರೆ, ಬದುಕು ಕೊನೆಗೊಳಿಸಿಕೊಳ್ಳುತ್ತಿರುವ ಯುವಜನರ ಪ್ರಮಾಣ ಕರ್ನಾಟಕದಲ್ಲಿ ಹೆಚ್ಚಾಗಿದೆ.

ಆತ್ಮಹತ್ಯೆ ಪ್ರಕರಣಗಳು ವೈಯಕ್ತಿಕ ಅಥವಾ ಕೌಟುಂಬಿಕ ನಷ್ಟ ಮಾತ್ರವಲ್ಲ; ಸಮಾಜ–ದೇಶಕ್ಕಾದ ನಷ್ಟವೂ ಆಗಿರುತ್ತದೆ. ಆತ್ಮಹತ್ಯೆಗಳಿಂದ ದೇಶದ ಮೇಲೆ ಆಗುತ್ತಿರುವ ಒಟ್ಟು ಆರ್ಥಿಕ ಹೊರೆಯಲ್ಲಿ ಶೇ. 53ರಷ್ಟು ಪಾಲು, ದುಡಿಮೆಯ ಸಾಮರ್ಥ್ಯ ಹೆಚ್ಚಾಗಿರುವ 20ರಿಂದ 34ರ ವಯಸ್ಸಿನವರ ಆತ್ಮಹತ್ಯೆಯಿಂದ ಉಂಟಾಗುತ್ತಿದೆ ಎಂದು 'ಲ್ಯಾನ್ಸೆಟ್' ವರದಿ ಹೇಳುತ್ತಿದೆ. ಈ ಆರ್ಥಿಕ ಹೊರೆಯಲ್ಲಿ ಕರ್ನಾಟಕದ ಪಾಲು ಐದನೇ ಒಂದರಷ್ಟಿದೆ. 2021ರಲ್ಲಿ ದೇಶದಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆಗಳಲ್ಲಿ ಶೇ. 8ರಷ್ಟು ಕರ್ನಾಟಕದಲ್ಲೇ ಸಂಭವಿಸಿದ್ದವು. ಕಳೆದ ಹದಿನೈದು ತಿಂಗಳಲ್ಲಿ ಒಂದೂವರೆ ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ' (ಎನ್‌ಸಿಆರ್‌ಬಿ) ವರದಿಗಳೂ ಭಿನ್ನವಾಗಿಲ್ಲ. ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆಗಳು ವರದಿಯಾಗುವ ಮೊದಲ ಐದು ರಾಜ್ಯಗಳ ಪೈಕಿ ಕರ್ನಾಟಕವೂ ಒಂದೆನ್ನುವುದನ್ನು 'ಎನ್‌ಸಿಆರ್‌ಬಿ' ದೃಢಪಡಿಸಿದೆ.

ನಾಡನ್ನು ಕಟ್ಟಲು ಕೈ ಜೋಡಿಸಬೇಕಾದ ತರುಣ ತರುಣಿಯರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ನಿರುದ್ಯೋಗ, ಪ್ರೇಮವೈಫಲ್ಯ, ಆರ್ಥಿಕ ಸಂಕಷ್ಟ ಸೇರಿದಂತೆ ವಿವಿಧ ಸಂಗತಿಗಳನ್ನು ಕಾರಣಗಳನ್ನಾಗಿ ಗುರ್ತಿಸುತ್ತೇವೆ. ಹೀಗೆ ಯಾವುದಾದರೊಂದು ಕಾರಣವನ್ನಾಗಿ ಗುರ್ತಿಸುವುದು ಸಮಸ್ಯೆಯ ಸರಳೀಕರಣವಷ್ಟೇ. ಬದುಕಿನ ಬಗ್ಗೆ ಯುವಜನ ಭರವಸೆ ಕಳೆದುಕೊಳ್ಳಲು ಕಾರಣಗಳೇನು ಎನ್ನುವುದರ ಬಗ್ಗೆ ನಮ್ಮಲ್ಲಿ ಗಂಭೀರ ಚಿಂತನೆಗಳೇ ನಡೆದಿಲ್ಲ. ಸಮಾಜ ಹಾಗೂ ರಾಜಕಾರಣ ಯುವಶಕ್ತಿಯ ಆಶೋತ್ತರಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತಿದೆ ಎನ್ನುವುದರ ವಸ್ತುನಿಷ್ಠ ಅವಲೋಕನವೂ ನಡೆದಿಲ್ಲ.

ಯುವಜನರ ಸಾವುಗಳನ್ನು ಭಾರತೀಯ ರಾಜಕಾರಣ ತಲುಪಿರುವ ಅಧಃಪತನದ ರೂಪದಲ್ಲಿ ನೋಡಬೇಕಾಗಿದೆ. ಈ ಹೊತ್ತಿನ ಯುವಜನರ ಅಸಹಾಯಕತೆಯ ಹೊಣೆಗಾರಿಕೆ ನಿಸ್ಸಂದೇಹವಾಗಿ ರಾಜಕೀಯ ಮುಖಂಡರದೇ ಆಗಿದೆ. ಎಲ್ಲ ರಾಜಕೀಯ ಪಕ್ಷಗಳಿಗೂ ಯುವಶಕ್ತಿ ಬೇಕು. ಅಧಿಕಾರದ ಏಣಿಗಳನ್ನಾಗಿ ಯುವಜನರನ್ನು ಬಳಸಿಕೊಳ್ಳಲು ರಾಜಕೀಯ ಪಕ್ಷಗಳು ಪೈಪೋಟಿ ನಡೆಸುತ್ತವೆ. ಈ ಉತ್ಸಾಹ ಯುವಕ ಯುವತಿಯರಿಗೆ ಬದುಕು ಕಟ್ಟಿಕೊಡುವುದರ ಬಗ್ಗೆ ವ್ಯಕ್ತವಾಗುವುದಿಲ್ಲ. ಉದ್ಯೋಗ ಸೃಷ್ಟಿಸುವಲ್ಲಿ ವಿಫಲವಾಗಿರುವ ಸರ್ಕಾರಗಳು, ತಮ್ಮ ವೈಫಲ್ಯವನ್ನು ಮರೆಮಾಚಲು ಯುವಜನರನ್ನು ಭಾವೋದ್ರೇಕದ ಸಂಗತಿಗಳಲ್ಲಿ ತೊಡಗಿಸುತ್ತಿವೆ. ವೈಯಕ್ತಿಕ ಬದುಕು ಹಾಗೂ ಕುಟುಂಬದ ಹಿತಚಿಂತನೆ ಮಾಡಬೇಕಾದ ವಯಸ್ಸಿನಲ್ಲಿ ರಾಜಕಾರಣ ಹಾಗೂ ಧರ್ಮದ ಅಮಲನ್ನು ನೆತ್ತಿಗೇರಿಸಿಕೊಂಡು ಜೀವನವನ್ನು ಹೈರಾಣಾಗಿಸಿಕೊಂಡ ಯುವಜನ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ರಾಜಕಾರಣಿಗಳ ಮಕ್ಕಳು ಮಹಾನಗರಗಳಲ್ಲಿ ಇಲ್ಲವೇ ವಿದೇಶಗಳಲ್ಲಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಕಲಿಯುತ್ತಿರುತ್ತಾರೆ; ಶ್ರೀಸಾಮಾನ್ಯರ ಮಕ್ಕಳು ಕ್ಷುಲ್ಲಕ ರಾಜಕಾರಣದ ದಾಳಗಳಾಗುತ್ತಿರುತ್ತಾರೆ. ಶಿಕ್ಷಣ ವ್ಯವಸ್ಥೆಯನ್ನೂ ಭ್ರಷ್ಟಗೊಳಿಸಿರುವ ರಾಜಕೀಯ ವ್ಯವಸ್ಥೆ, ಇತ್ತೀಚಿನ ವರ್ಷಗಳಲ್ಲಿ ಶಾಲಾಕಾಲೇಜುಗಳನ್ನೂ ತಂತಮ್ಮ ಸಿದ್ಧಾಂತಗಳ ಪ್ರಯೋಗಶಾಲೆಗಳನ್ನಾಗಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಇದರ ಪರಿಣಾಮವಾಗಿ, ಮಕ್ಕಳ ಮನಸ್ಸಿನಲ್ಲಿ ಮೌಲ್ಯಗಳನ್ನು ಬಿತ್ತಬೇಕಾದ ಶಿಕ್ಷಣ ವ್ಯವಸ್ಥೆ, ಎಳೆಯರನ್ನು ಸಂವೇದನಾಶೂನ್ಯರನ್ನಾಗಿಸುತ್ತಿದೆ. ರಾಜಕಾರಣದ ಕಬಂಧ ಬಾಹುಗಳಿಗೆ ಸಿಕ್ಕ ತರುಣ ತರುಣಿಯರು ಭಸ್ಮಾಸುರ ಗುಣವನ್ನು ಪಡೆಯುತ್ತಿದ್ದಾರೆ. ಸುಡುವ ಕೈ ಹಾಗೂ ನಾಶವಾಗುವ ದೇಹ – ಎರಡೂ ಅಮಾಯಕರದೇ ಆಗಿದೆ. ಈ ದುರಂತಕ್ಕೆ ಕಾರಣರಾದವರ ಸಂಪತ್ತು ಬೆಳೆಯುತ್ತಲೇ ಇರುತ್ತದೆ. ಅವರ ಮಕ್ಕಳು ಹೊಸ ತಲೆಮಾರಿನ ಏಣಿಗಳನ್ನು ಹುಡುಕುತ್ತಿರುತ್ತಾರೆ.

ವಿಶ್ವಶಕ್ತಿಯಾಗುವ ಹಂಬಲದ ಭಾರತದಲ್ಲಿ ಯುವಜನರನ್ನು ಬಂಡವಾಳವಾಗಿ ಗುರ್ತಿಸುತ್ತಿರುವ ಸಂದರ್ಭದಲ್ಲಿ, ಆ ಅಮೂಲ್ಯನಿಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗದಿರುವುದು ವಿಷಾದದ ಸಂಗತಿ. ಯುವಜನರ ಆತ್ಮಹತ್ಯೆ ಏರುಗತಿಯಲ್ಲಿರುವುದು 'ರಾಷ್ಟ್ರೀಯ ಆತಂಕ'ದ ಸಂಗತಿಯಾಗಬೇಕು. ಆ ಆತಂಕ, ಶಿಕ್ಷಣ ಕ್ಷೇತ್ರ ಸೇರಿದಂತೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಆಗಬೇಕಾದ ರಚನಾತ್ಮಕ ಬದಲಾವಣೆಗಳತ್ತ ನಮ್ಮನ್ನು ಕೊಂಡೊಯ್ಯಬೇಕು.

**■ ರಘುನಾಥ ಚ.ಹ.**



ಈಶ್ವರ್